



# ಬರದಲ್ಲೂ ನೀರುಣಿಸುವ ನವಾಬರ ಕಾಲದ ಕೆರೆ

ಐದು ಸಾವಿರ ಕುಟುಂಬಗಳಿಗೆ ಕುಡಿಯುವ ನೀರನ್ನು ಒದಗಿಸುತ್ತಿರುವ ಕುಂದಗೋಳ ತಾಲ್ಲೂಕಿನ ಅಗಸಿಹೊಂಡ ಕೆರೆ ಈ ಭಾಗದ ಜನತೆಯ ಪಾಲಿನ ಅಮೃತಬಿಂದು.

■ ಚಿತ್ರ– ಲೇಖನ: **ಚಂದ್ರಹಾಸ ಚಾರ್ಮಾಡಿ**

ಹುಬ್ಬಳ್ಳಿಯ ಕುಂದಗೋಳ ತಾಲೂಕಿನಲ್ಲಿರುವ ಅಗಸಿಹೊಂಡ ಕೆರೆ ವಿಸ್ತೀರ್ಣ ಒಂದು ಎಕರೆ. ಇಂದಿಗೂ ಕೆರೆಯ ಪಕ್ಕದಲ್ಲಿರುವ ಪ್ರಾಚೀನ ಪಂಪ್‌ಶೆಡ್, ಪಂಪ್, ನೀರಾವರಿಗಾಗಿ ಹಾಕಲಾದ ಕಬ್ಬಿಣದ ಪೈಪ್ ನವಾಬರ ಕಾಲದಲ್ಲಿ ಕೆರೆಯ ನಿರ್ಮಾಣವಾಗಿದೆ ಎಂಬ ಮಾತಿಗೆ ಸಾಕ್ಷಿ. ಜಮಖಂಡಿ ಸಂಸ್ಥಾನದ ನವಾಬರ ಆಡಳಿತದಲ್ಲಿ ಈ ಪ್ರದೇಶದ ಜನತೆಗೆ ಕೆರೆಯಿಂದ ಪಂಪ್ ಮಾಡಿ ಎತ್ತಿದ ನೀರನ್ನು ಪೈಪ್ ಮೂಲಕ ಪ್ರತಿ ಮನೆಗೆ ಸಾಗಿಸುತ್ತಿದ್ದರಂತೆ. ಹಲವಾರು ವರ್ಷಗಳಿಂದ ಈ ಕೆರೆ ನೀರನ್ನು ಊರಿನ ಜನ ಕುಡಿಯಲು ಬಳಸುತ್ತಿದ್ದು ಇದರ ಉಸ್ತುವಾರಿಯನ್ನು ಕುಂದಗೋಳ ಪಟ್ಟಣ ಪಂಚಾಯತ್ ನಿರ್ವಹಿಸುತ್ತಿದೆ.

ಕೆರೆಯಿಂದಾಗಿ ಈ ಊರಿಗೆ ಅಗಸಿಹೊಂಡ ಎಂಬ ಹೆಸರು ಬಂದಿದೆ. ಹಳ್ಳಿಯ ಮನೆಗಳಿಗೆ ವಾರಕ್ಕೊಂದು ಬಾರಿ ಹುಬ್ಬಳ್ಳಿಯಿಂದ ಪೈಪ್‌ಲೈನ್ ಮೂಲಕ ಮಲಪ್ರಭಾದ ನೀರು ಬರುತ್ತದೆ. ಇತರ ದಿನಗಳಲ್ಲಿ ಅಗಸಿಹೊಂಡ ಕೆರೆಯ ನೀರನ್ನು ಜನ ಬಳಸುತ್ತಾರೆ. ಕುಂದಗೋಳ ಪಟ್ಟಣ ಪಂಚಾಯತ್ ಸ್ವಚ್ಛತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕೆರೆಯ ಸುತ್ತ ಕಾಂಪೌಂಡ್ ನಿರ್ಮಿಸಿ ಕೆರೆಯ ಹೂಳೆತ್ತುವ ಕೆಲಸವನ್ನು ಮಾಡಿದೆ. ವಾಚ್‌ಮನ್ ಒಬ್ಬರನ್ನು ನೇಮಿಸಿದೆ. ಕೆರೆಗೆ ಹತ್ತಿ ಇಳಿಯಲು ಒಂದೆಡೆಯಿಂದ ಕಲ್ಲಿನಿಂದ ಮೆಟ್ಟಿಲುಗಳನ್ನು ನಿರ್ಮಿಸಿದೆ. ಬಟ್ಟೆ ಒಗೆಯಲು, ದನಗಳ ಮೈತೊಳೆಯಲು ಇಲ್ಲಿ ಅವಕಾಶಗಳಿಲ್ಲ. ಕೊಳಚೆ ನೀರು ಇಲ್ಲಿಗೆ ಸೇರುವುದಿಲ್ಲ. ಕೆರೆ ಸಂಪೂರ್ಣವಾಗಿ ಹೂಳು ಮುಕ್ತವಾಗಿದೆ.

## ನವಾಬರ ಕಾಲದ ರಾಜಕಾಲುವೆ

ಅಗಸಿಹೊಂಡ ಕೆರೆಯ ವಿಸ್ತೀರ್ಣ ಒಂದು ಎಕರೆಯಾದರೆ ಅದಕ್ಕೆ ನೀರನ್ನು ಒದಗಿಸುವ ಕೆರೆ ಅಂಗಳದ ವಿಸ್ತೀರ್ಣ ಎಂಟು ಎಕರೆ. ಒಟ್ಟಾಗಿ 'ಒಂಭತ್ತು ಎಕರೆಯ ಕೆರೆ' ಎಂದು ಇದನ್ನು ಕರೆಯುತ್ತಾರೆ. ಈ ಊರಿನಲ್ಲಿ ಬಿದ್ದ ನೀರು ಸುಮಾರು ಏಳು ಕಿ.ಲೋ ಮೀಟರ್ ದೂರದಿಂದ ರಾಜಕಾಲುವೆಯ ಮೂಲಕ ಕೆರೆ ಅಂಗಳಕ್ಕೆ ಬರುತ್ತದೆ. ಅಲ್ಲಿಂದ ನೀರು ಫಿಲ್ಟರ್ ಆಗಿ ಶುದ್ಧ ನೀರು ಅಗಸಿಹೊಂಡ ಕೆರೆಗೆ ನವಾಬರ ಕಾಲದ ಕಬ್ಬಿಣದ ಪೈಪ್ ಮೂಲಕ ಬರುತ್ತದೆ.

ಅಗಸಿಹೊಂಡ ಕೆರೆ ತುಂಬಿದಲ್ಲಿ ಶೇಖರಣೆಗೊಂಡ ನೀರು ಕೆರೆ ಅಂಗಳಕ್ಕೆ ಹೋಗದಂತೆ ಪೈಪನ್ನು ಜೋಡಿಸಲಾಗಿದೆ. ಬೇಕಾದಾಗ ಅಗಸಿಹೊಂಡ ಕೆರೆಗೆ ನೀರು ಬೀಳುವಂತೆ ಕೆರೆ ಅಂಗಳಕ್ಕೆ ಗೇಟ್‌ವಾಲ್‌ವೊಂದನ್ನು ನವಾಬರ ಕಾಲದಲ್ಲೇ ಇರಿಸಲಾಗಿದೆ. ಇನ್ನು ಕೆರೆ ಅಂಗಳ ತುಂಬಿದಾಗ ಗೇಟ್‌ವಾಲ್ ತನ್ನಷ್ಟಕ್ಕೆ ಮುಚ್ಚಿಕೊಳ್ಳುವ, ಕೆರೆ ಅಂಗಳದಲ್ಲಿ ನೀರು ಹೆಚ್ಚಾದಾಗ ತೆರೆದುಕೊಳ್ಳುವ ವ್ಯವಸ್ಥೆ ಇಲ್ಲಿದೆ.

## ಕಬ್ಬಿಣದ ಗೇಟ್

ಏಳು ಕಿ.ಲೋ ಮೀಟರ್‌ನಿಂದ ಒಂದೇ ಸಮನೆ ನೀರು ಹರಿದು ಬಂದರೆ ಕೆರೆಯಲ್ಲಿ ಮರಳು, ಮಣ್ಣು ತುಂಬಿಕೊಳ್ಳುವ ಸಾಧ್ಯತೆಯಿರುತ್ತದೆ. ಇದಕ್ಕಾಗಿ ನವಾಬರು ಕಾಲುವೆಯ ಮಧ್ಯಭಾಗದಲ್ಲೊಂದು ಕಬ್ಬಿಣದ ಗೇಟನ್ನು ಅಳವಡಿಸಿದ್ದಾರೆ. ಅದು ಇಂದಿಗೂ ಹಾಗೆಯೇ ಇದ್ದು ಕಾಲುವೆಯಲ್ಲಿ ನೀರು ಜಾಸ್ತಿಯಾದಾಗ ಈ ಗೇಟನ್ನು ಹಾಕಲಾಗುತ್ತದೆ. ಗೇಟ್‌ಗೆ ಹಲಗೆ ಹಾಕಿ ಇಂದಿಗೂ ಉಪಯೋಗಿಸುತ್ತಿದ್ದಾರೆ. ಪ್ರತಿವರ್ಷ ಮಳೆಗಾಲದಲ್ಲಿ ಶೇಖರಗೊಂಡ ನೀರಿನ ಪ್ರಮಾಣವನ್ನು ತಿಳಿಸುವ, ನವಾಬರ ಕಾಲದಲ್ಲಿ ಬಳಸುತ್ತಿದ್ದ ಮಾಪನವೊಂದು ಇಂದಿಗೂ ಕಾರ್ಯನಿರ್ವಹಿಸುತ್ತಿದೆ.

## ಕೆರೆ ಅಂಗಳ

ಎಂಟು ಎಕರೆ ವಿಸ್ತೀರ್ಣದಲ್ಲಿರುವ ಕೆರೆ ಅಂಗಳವು, ಅಗಸಿಹೊಂಡ ಕೆರೆಯ ಪ್ರಮುಖ ಜಲಮೂಲ. ಮಳೆಗಾಲದ ನೀರು ಶೇಖರಣೆಯಾದರೆ ವರ್ಷದುದ್ದಕ್ಕೂ ನೀರು ಬತ್ತುವುದಿಲ್ಲ. ಅಗಸಿಹೊಂಡಕೆರೆ ಊರಿನ ಮಂದಿಗೆ ನೀರನ್ನು ಒದಗಿಸುವುದನ್ನು ಎಂದೂ ನಿಲ್ಲಿಸಿಲ್ಲ.

ಕಳೆದ ಬೇಸಿಗೆಯಲ್ಲಿ ಧಾರವಾಡ ತಾಲೂಕಿನ 90 ಎಕರೆ ವಿಸ್ತೀರ್ಣದ ಮುಗದಕೆರೆ, 19 ಎಕರೆಯ ಹೆಬ್ಬಳ್ಳಿ, 6 ಎಕರೆಯ ತಿಮ್ಮಾಪುರ, 3 ಎಕರೆಯ ಹಳ್ಳಿಗೇರಿ, 2 ಎಕರೆಯ ಕೊಟಬಾಗಿ ಮತ್ತು ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ರುದ್ರವಾಡಿ ಗ್ರಾಮದ ಬಸವನಕಟ್ಟೆಕೆರೆ, ಸರಸಾಂಬಾದ ಮಡ್ಡಿಕೆರೆ, ಆಫಜಲ್‌ಪುರ ತಾಲೂಕಿನ ಬಳೂರ್ಗಿ ಗ್ರಾಮದ ಹೊಸಕೆರೆ ಕೆರೆಗಳ ಹೂಳೆತ್ತುವ ಮೂಲಕ ಬೇಸಿಗೆಗಾಲದಲ್ಲೂ ನೀರು ಪಡೆಯುವ ಪ್ರಯತ್ನವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಮಾಡಲಾಗಿದೆ.

ಇತಿಹಾಸ ಪ್ರಸಿದ್ಧ ಈ ಕೆರೆಯ ಹೂಳೆತ್ತುವ ಕೆಲಸವನ್ನು ಧಾರವಾಡ ಪ್ರಾದೇಶಿಕ ನಿರ್ದೇಶಕ ಎನ್. ಜಯಶಂಕರ ಶರ್ಮ, ನಿರ್ದೇಶಕ ದಿನೇಶ್ ಎಂ.,

